ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ-583105
VIJAYANAGARA SRI KRISHNADEVARAYA UNIVERSITY
"Jnana Sagar" Campus, Vinayaka Nagara, Ballari-583 105

ಕುಲಸಚಿವರು

ಸಂಖ್ಯೆ:ವಿ.ಶ್ರೀ.ಕೃ.ವಿ.ವಿ.ಬ/ಕಾ.ಅ.ಮಂ/ಸಂಯೋಜನೆ/2024-25/735 ದಿನಾಂಕ: 23-10-2024

# ಸಂಯೋಜನಾ ಮಾರ್ಗಸೂಚಿ 2025-26

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಹಾಗೂ ಇನ್ನಿತರ ಸಾಂಪ್ರದಾಯಿಕ ವಿಷಯಗಳಲ್ಲಿ ಪದವಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳಿಂದ ಹೊಸ ಸಂಯೋಜನೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಸ್ತುತ ವಿಶ್ವವಿದ್ಯಾಲಯದಿಂದ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳು ಸ್ನಾತಕ/ ಸ್ನಾತಕೋತ್ತರ ಕೋರ್ಸ್‌ಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ್/ ಹೊಸ ವಿಷಯ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ/ ಮಹಾವಿದ್ಯಾಲಯಗಳ ಹೆಸರು ಬದಲಾವಣೆ/ಮಹಾವಿದ್ಯಾಲಯ ಸ್ಥಳಾಂತರ/ಆಡಳಿತ ಮಂಡಳಿ ಬದಲಾವಣೆ ಹಾಗೂ ಇತ್ಯಾದಿಗಳಿಗಾಗಿ ಸಂಬಂಧಿಸಿದ ದಾಖಲೆಗಳೊಂದಿಗೆ ನಿಗದಿತ ಸಂಯೋಜನಾ ಶುಲ್ಕದೊಂದಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ.

## ಸಂಯೋಜನೆಗೆ ಸಂಬಂಧಿಸಿದ ಸಾಮಾನ್ಯ ಸೂಚನೆಗಳು:

1. ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಹೊಸ ಸ್ನಾತಕ ಮಹಾವಿದ್ಯಾಲಯ ಪ್ರಾರಂಭಿಸಲು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
2. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದು ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳು ಸ್ನಾತಕ/ ಸ್ನಾತಕೋತ್ತರ ಕೋರ್ಸ್‌ಗಳಿಗೆ ಮುಂದುವರಿಕೆ ಮತ್ತು ವಿಸ್ತರಣೆ ಪಡೆಯಲು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
3. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಹೊಸ ಸ್ನಾತಕ ಕೋರ್ಸ್/ ಹೊಸ ಸ್ನಾತಕೋತ್ತರ ಕೋರ್ಸ್/ಹೊಸ ವಿಷಯ/ ಆರಂಭಿಸಲು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
4. ಅಸ್ತಿತ್ವದಲ್ಲಿರುವ ಸ್ನಾತಕ ಕೋರ್ಸ್ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
5. ಸತತವಾಗಿ ಐದು ವರ್ಷಗಳ ಕಾಲ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದಿರುವ ಕೋರ್ಸ್‌ಗಳಿಗೆ ಶಾಶ್ವತ ಸಂಯೋಜನೆ ಪಡೆಯಲು (ನ್ಯಾಕ್ ಮಾನ್ಯತೆ ಕಡ್ಡಾಯ) ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
6. ಈಗಾಗಲೇ ಮಹಾವಿದ್ಯಾಲಯಗಳಿಗೆ/ ಕೋರ್ಸ್‌ಗಳಿಗೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಮುಂದುವರಿಕೆ ಪಡೆದಿರುವ ಸಂಯೋಜನೆಯು 2025-26ನೇ ಶೈಕ್ಷಣಿಕ ಸಾಲಿಗೆ ಕೊನೆಗೊಳ್ಳುತ್ತಿದ್ದರೆ, ಅಂತಹ ಕೋರ್ಸ್‌ಗಳಿಗೆ ಕಡ್ಡಾಯವಾಗಿ ಶಾಶ್ವತ ಸಂಯೋಜನೆ ಪರಿಶೀಲನೆಗೆ ಒಳಪಡಲು ಸಂಬಂಧಿಸಿದ ಶುಲ್ಕಗಳೊಂದಿಗೆ ಅರ್ಜಿ ಸಲ್ಲಿಸುವುದು.
7. ಎಂ.ಬಿ.ಎ./ ಎಂ.ಸಿ.ಎ. ಕೋರ್ಸ್ ಪ್ರಾರಂಭಿಸುವವರು AICTE ಯವರ ಮತ್ತು ಬಿ.ಇಡಿ./ ಬಿ.ಪಿ.ಇಡಿ./ ಎಂ.ಇಡಿ./ ಎಂ.ಪಿ.ಇಡಿ./ ಬಿ.ಎ.ಇಡಿ./ ಬಿ.ಎಸ್ಸಿ.ಇಡಿ. ಕೋರ್ಸ್ ಪ್ರಾರಂಭಿಸುವವರು NCTE ಅನುಮೋದನೆ ಕಡ್ಡಾಯವಾಗಿ ಪಡೆದುಕೊಂಡು ಅರ್ಜಿ ಸಲ್ಲಿಸಬೇಕು.
8. ಸತತ 10 ವರ್ಷಗಳ ಕಾಲ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದುಕೊಂಡಿರುವ, ಪ್ರಸ್ತುತ ನ್ಯಾಕ್ ಸಂಸ್ಥೆಯಿಂದ "ಎ" ಗ್ರೇಡ್ ಮಾನ್ಯತೆ ಪಡೆದಿರುವ ಮಹಾವಿದ್ಯಾಲಯದವರು ಸ್ವಾಯತ್ತತೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದು.
9. ಯಾವುದೇ ವಿಧದ ಸಂಯೋಜನೆಗೆ ಸಂಬಂಧಿಸಿದಂತೆ, ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸರ್ಕಾರವು ಸೂಚಿಸಿರುವಂತೆ ಕನಿಷ್ಠ ಅಂಕಗಳು ಹಾಗೂ ಎಲ್ಲ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಬೇಕು. ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿ ಸರ್ಕಾರವು ನಿಗದಿಪಡಿಸಿದ Score and Decision Criteria ಪರಿಶೀಲಿಸಲು ಸೂಚಿಸಿದೆ.

10. ಸದರಿ ಸಂಯೋಜನಾ ಅಧಿಸೂಚನೆ ಹಾಗೂ ಇದರಲ್ಲಿನ ಸೂಚನೆಗಳು, ಮಾರ್ಗಸೂಚಿಗಳು, ನಿಯಮಾವಳಿಗಳು, ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ಹಾಗೂ ಸರ್ಕಾರದ ಆದೇಶಗಳುನುಸಾರ ಹಾಗೂ ಮುದ್ರಣ ದೋಷಗಳುಂಟಾಗಿದ್ದಲ್ಲಿ ತಿದ್ದುಪಡಿಗಳಿಗೆ ಒಳಗಾಗುವ ಷರತ್ತಿಗೆ ಒಳಪಟ್ಟಿರುತ್ತವೆ.

11. ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಆಡಳಿತ ಮಂಡಳಿಗಳ ಬದಲಾವಣೆ, ಮಹಾವಿದ್ಯಾಲಯಗಳನ್ನು ಸ್ಥಗಿತಗೊಳಿಸುವುದು, ಮಹಾವಿದ್ಯಾಲಯಗಳ ವಿಲೀನ, ಮಹಾವಿದ್ಯಾಲಯದ ಸ್ಥಳಾಂತರದ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದು.

12. ಶಾಶ್ವತ ಸಂಯೋಜನೆ ವಿಸ್ತರಣೆಗೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯಗಳು ಕೇವಲ ಅರ್ಜಿ ಶುಲ್ಕವನ್ನು ಮಾತ್ರ ಭರಿಸತಕ್ಕದ್ದು.

13. ಬಿ.ಎ/ ಬಿ.ಎಸ್ಸಿ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಕಾಂಬಿನೇಷನ್ನಗಳ ಬದಲಾಗಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುವುದರಿಂದ ಈ ಕೋರ್ಸ್‌ಗಳಿಗೆ ಸಂಬಂಧಪಟ್ಟ ಹಾಗೆ ಪ್ರತಿ ಸಂಯೋಜಿತ ಕಾಲೇಜಿನ ಅನುಮೋದಿತ ಕಾಂಬಿನೇಷನ್‌ಗಳಲ್ಲಿನ ಎಲ್ಲಾ ವಿಷಯದ ವಿದ್ಯಾರ್ಥಿಗಳ ಒಟ್ಟು ವಿದ್ಯಾರ್ಥಿ ಪ್ರಮಾಣ (Intake) ಪ್ರಸ್ತುತ ಅನುಮೋದಿತ ವಿದ್ಯಾರ್ಥಿ ಪ್ರಮಾಣವನ್ನು ಮೀರಕೂಡದು.

14. ಯಾವುದೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕದ ಪಾವತಿಯಲ್ಲಿ ಬಾಕಿ ಇದ್ದಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಸದರಿ ಶೈಕ್ಷಣಿಕ ಸಾಲಿನ ಬಾಕಿ ಶುಲ್ಕ ಪಾವತಿಸಿದ ನಂತರವೇ 2025-26ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸತಕ್ಕದ್ದು.

**ಸೂಚನೆಗಳು:**

**ಕರ್ನಾಟಕ ಸರ್ಕಾರದ ಸಂಯೋಜನೆ ಸಂಬಂಧಿತ ವೆಬ್‌ಸೈಟ್ ವಿಳಾಸ:** UUCMS ತಂತ್ರಾಂಶದ ಮೂಲಕ ಸಂಬಂಧಿಸಿದ ಎಲ್ಲ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದು. UUCMS ತಂತ್ರಾಂಶದ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿ ಪಡೆದು, ಅದಕ್ಕೆ ದೃಢೀಕೃತ ಪೂರಕ ದಾಖಲೆಗಳನ್ನು ಹಾಗೂ ಶುಲ್ಕ ಭರಿಸಿದ್ದರ ಬಗ್ಗೆ ರಸೀದಿ ಮತ್ತು ಸಂಪೂರ್ಣ ದಾಖಲೆಗಳೆಲ್ಲವೂಗಳನ್ನು ಬೈಂಡಿಂಗ್/ ಸ್ಪೈರಲ್ ಬೈಂಡಿಂಗ್ ಮಾಡಿಸಿ, ಎರಡು ಪ್ರತಿಗಳನ್ನು ನಿಗದಿತ ದಿನಾಂಕದೊಳಗಾಗಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗ, **ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ-583105** ಕ್ಕೆ ಸಲ್ಲಿಸುವುದು. ಒಂದು ವೇಳೆ ಅರ್ಜಿಯಲ್ಲಿ ಸರಿಯಾಗಿ/ ಸ್ಪಷ್ಟವಾಗಿ ಮಾಹಿತಿ ಒದಗಿಸದೇ ಇದ್ದಲ್ಲಿ, ಅದರಿಂದ ಉಂಟಾಗುವ ಗೊಂದಲ/ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೇ ಹೊಣೆಗಾರರಾಗಿರುತ್ತಾರೆ. ಅಪೂರ್ಣವಾದ ಹಾಗೂ ಸೂಕ್ತ ದೃಢಿಕೃತ ದಾಖಲೆಗಳಿಲ್ಲದ ಅರ್ಜಿ/ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಂಯೋಜನಾ ಅರ್ಜಿ ಶುಲ್ಕ ಮತ್ತು ಭರಿಸಬೇಕಾದ ಸಂಯೋಜನ ಶುಲ್ಕಗಳ ವಿವರ ಹಾಗೂ ಸಂಯೋಜನೆಗೆ ಅರ್ಜಿಗಳನ್ನು ಸಲ್ಲಿಸಲು ಹಾಗೂ ಸಂಬಂಧಿಸಿದ ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ ವಿಳಾಸ (website: www.vskub.ac.in) ದಲ್ಲಿ ನೋಡಬಹುದು.

1. ಕರ್ನಾಟಕ ರಾಜ್ಯ ಸರ್ಕಾರದ ಆದೇಶಾನುಸಾರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಮಹಾವಿದ್ಯಾಲಯಗಳಿಗೆ ಸಂಯೋಜನಾ ಶುಲ್ಕದಲ್ಲಿ ಮಾತ್ರ ಶೇಕಡಾ 50%ರಷ್ಟು ವಿನಾಯತಿ ನೀಡಲಾಗಿದೆ. ಸದರಿ ವಿನಾಯತಿ ಪಡೆಯಲು, ಆಡಳಿತ ಮಂಡಳಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕೃತ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಅಂತಹ ಆಡಳಿತ ಮಂಡಳಿಯ/ ಮಹಾವಿದ್ಯಾಲಯದ ಅರ್ಜಿಗಳನ್ನು ಶುಲ್ಕದ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.

2. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಹೆಸರುಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾಲಯ ನೀಡಿರುವ ಆದೇಶ/ ಅಧಿಸೂಚನೆಗಳಲ್ಲಿರುವಂತೆ ಇದೆ ಎಂಬುದರ ಬಗ್ಗೆ ಪರಿಶೀಲಿಸಿಕೊಳ್ಳುವುದು. ಒಂದು ವೇಳೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಹೆಸರಿನಲ್ಲಿ ವ್ಯತ್ಯಾಸಗಳಿದ್ದಲ್ಲಿ ಕೂಡಲೇ ಕಾಲೇಜು ಅಭಿವೃದ್ಧಿ ಮಂಡಳಿಯ ಗಮನಕ್ಕೆ ತಂದು, ಸಂಯೋಜನಾ ಅರ್ಜಿ ಸಲ್ಲಿಸುವ ಕಾರ್ಯದಲ್ಲಿ ತೊಡಗಿಕೊಳ್ಳತಕ್ಕದ್ದು. ಮಹಾವಿದ್ಯಾಲಯದವರು ಸಂಯೋಜನಾ ಅರ್ಜಿಯೊಂದಿಗೆ ಒದಗಿಸಬೇಕಾದ ಮಹಾವಿದ್ಯಾಲಯದ ವಿವರಗಳ ನಮೂನೆಯಲ್ಲಿಯೂ ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾಲಯ ನೀಡಿರುವ ಆದೇಶ/ ಅಧಿಸೂಚನೆಗಳಲ್ಲಿರುವಂತೆಯೇ ಹೆಸರನ್ನು ನಮೂದಿಸತಕ್ಕದ್ದು.

3. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (MHRD) ನವದೆಹಲಿ ಇವರು ಸೂಚಿಸಿದಾಗ 2022-23ನೇ ಸಾಲಿನ DCF-II ಫೈಲ್‌ನ್ನು AISHE ವೆಬ್‌ಸೈಟಿಗೆ **(www.aishe.ac.nic.in)** ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.

4. ಯು.ಜಿ.ಸಿ., ಕರ್ನಾಟಕ ಸರ್ಕಾರ ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ನಿಬಂಧನೆ (Regulations), ಅಧಿನಿಯಮ (Act), ಪರಿನಿಯಮ (Statute), ನಿಯಮ (Rules), ಆಧ್ಯಾದೇಶ (Ordinance), ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವ ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ತುಂಬಬೇಕಾದ ಎಲ್ಲ ರೀತಿಯ ಶುಲ್ಕಗಳನ್ನು ಭರಿಸಲು ಒಪ್ಪಿಗೆಯಿರುವ ಬಗ್ಗೆ ರೂ.100/-ಗಳ ಛಾಪಾ ಕಾಗದ ಮೇಲೆ ಮುಚ್ಚಳಿಕೆ ಪತ್ರ (Executive of bond)ವನ್ನು ಅರ್ಜಿಯೊಡನೆ ಕಡ್ಡಾಯವಾಗಿ ಲಗತ್ತಿಸಿರಬೇಕು.

5. ಹೊಸದಾಗಿ ಆರಂಭಿಸಲಾಗುವ ಮಹಾವಿದ್ಯಾಲಯಗಳಾಗಲಿ ಅಥವಾ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಾಗಲೀ ಸರ್ಕಾರ ಹಾಗೂ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 60ರಂತೆ ತೆಗೆದುಕೊಳ್ಳುವಂತಿಲ್ಲ. ಒಂದು ವೇಳೆ ಹೆಚ್ಚುವರಿಯಾಗಿ ಪ್ರವೇಶ ಪಡೆದ ಯಾವುದೇ ಒಬ್ಬ ವಿದ್ಯಾರ್ಥಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 61ರಂತೆ ಮಹಾವಿದ್ಯಾಲಯ/ ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಅರ್ಹನಾಗಿರುವುದಿಲ್ಲ. ಒಂದು ವೇಳೆ ಹೆಚ್ಚುವರಿ ಪ್ರವೇಶ ತೆಗೆದುಕೊಂಡಲ್ಲಿ ಮುಂದಾಗುವ ಆಗು-ಹೋಗುಗಳಿಗೆ ಮಹಾವಿದ್ಯಾಲಯವೇ ಜವಾಬ್ದಾರಿಯಾಗಿರುತ್ತದೆ.

6. ಮಹಾವಿದ್ಯಾಲಯದವರು ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಂತರ ಮತ್ತು ವಿಶ್ವವಿದ್ಯಾಲಯದ ತನಿಖಾ ಸಮಿತಿಯು ಪರಿಶೀಲನಾ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಪೂರ್ವದಲ್ಲಿ ತಾವು ಸಲ್ಲಿಸಿದ ಸಂಯೋಜನಾ ಅರ್ಜಿಯನ್ನು ಹಿಂಪಡೆಯಲು ಪತ್ರ ಮುಖೇನ ಅಧಿಕೃತವಾಗಿ ಮನವಿ ಮಾಡಿಕೊಂಡಲ್ಲಿ, ತಾವು ಭರಿಸಿದ ಶುಲ್ಕದಲ್ಲಿ 25% ಪ್ರಕ್ರಿಯಾ ಮೊತ್ತ ಕಡಿತಗೊಳಿಸಿ, ಇನ್ನುಳಿದ 75% ರಷ್ಟು ಹಣವನ್ನು ಮಾತ್ರ ಮರಳಿ ಕೊಡಲಾಗುವುದು. ಒಂದು ವೇಳೆ ತನಿಖಾ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಿದಲ್ಲಿ ಯಾವುದೇ ಶುಲ್ಕವನ್ನು ಮರಳಿ ನೀಡಲಾಗುವುದಿಲ್ಲ.

ಮುಂದುವರೆದು ಹೊಸ ಸಂಯೋಜನೆಗಳ ಅರ್ಜಿ ಸಲ್ಲಿಸಿದ ಸಂಸ್ಥೆಗಳು ಹೊಸ ಕಾಲೇಜಿನ ಸಂಯೋಜನೆಗೆ ಸರ್ಕಾರದಿಂದ ಮಾನ್ಯತೆ ಹೊಂದದಿದ್ದಲ್ಲಿ ಸಂಯೋಜನಾ ಸುಲ್ಕ ಪಾವತಿಯಲ್ಲಿ ರೂ.50,000/- ಗಳನ್ನು ಉಳಿಸಿಕೊಂಡು ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು.

7. ಸರ್ಕಾರಿ ಮಹಾವಿದ್ಯಾಲಯದವರು, ಹೊಸದಾಗಿ ಕೋರ್ಸ್, ವಿಷಯಗಳ ಸಮೂಹ, ಇತ್ಯಾದಿ ಹೊಸ ಸಂಯೋಜನೆಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ, ಮುಂದಿನ ಶೈಕ್ಷಣಿಕ ಸಾಲಿಗೆ ಅವಶ್ಯಕವಿರುವ ಹೊಸ ಸಂಯೋಜನೆಗಳ ಮಾಹಿತಿ, ಅವುಗಳ ಅಗತ್ಯತೆ ಮತ್ತು ಮಹಾವಿದ್ಯಾಲಯದಲ್ಲಿ ಹೊಸ ಸಂಯೋಜನೆಗಳಿಗೆ ಲಭ್ಯವಿರುವ ಶೈಕ್ಷಣಿಕ ಹಾಗೂ ಮೂಲಭೂತ ಸೌಲಭ್ಯಗಳ ಮಾಹಿತಿಯನ್ನು ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆ ಪಡೆದ ನಂತರವಷ್ಟೇ ವಿಶ್ವವಿದ್ಯಾಲಯಕ್ಕೆ ಹೊಸ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಸಲ್ಲಿಸುವುದು. ಹೀಗೆ ಅರ್ಜಿ ಸಲ್ಲಿಸುವಾಗ ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ತಾವು ಸಲ್ಲಿಸಿದ ಮನವಿ ಪತ್ರ ಹಾಗೂ ಸರ್ಕಾರವು ನೀಡಿರುವ ಅನುಮೋದನೆ ಪತ್ರದ ಪ್ರತಿಗಳನ್ನು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

8. ಸರ್ಕಾರಿ ಆದೇಶ ನಂ. ಇಡಿ/240/ಯು.ಆರ್.ಸಿ/2000 ದಿನಾಂಕ: 14-12-2004ರ ಮೇರೆಗೆ ಸರ್ಕಾರಿ ಮಹಾವಿದ್ಯಾಲಯಗಳ ಸಂಯೋಜನೆಗೆ, ಸರ್ಕಾರ ಕಾಲೇಜುಗಳಲ್ಲಿನ ನೂತನ ಕೋರ್ಸಗಳಿಗೆ/ ವಿಷಯಕ್ಕೆ/ ಭಾಷೆಗೆ/ ವಿದ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ಮುಂದುವರಿಕೆ/ ವಿಸ್ತರಣೆ ಮತ್ತು ಶಾಶ್ವತ ಸಂಯೋಜನೆಗೆ ವಿಶ್ವವಿದ್ಯಾಲಯಗಳಿಗೆ ಸಂದಾಯ ಮಾಡಬೇಕಾದ ಸಂಯೋಜನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಆದರೆ ಸರ್ಕಾರಿ ಮಹಾವಿದ್ಯಾಲಯಗಳಿಗಾಗಿ ನಿಗದಿಪಡಿಸಿದ ಸಂಯೋಜನಾ ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ. ಆದರೆ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದರೆ ಕನಿಷ್ಠ ಸಂಯೋಜನಾ ಶುಲ್ಕದೊಂದಿಗೆ ದಂಡ ಶುಲ್ಕವನ್ನೂ ಸಹ ಪಾವತಿಸಬೇಕಾಗುತ್ತದೆ.

9. ಹೀಗೆ ಮಹಾವಿದ್ಯಾಲಯಗಳಿಂದ ಸಲ್ಲಿಸಲಾಗುವ ಸಂಯೋಜನಾ ಅರ್ಜಿಗಳು ಸರಿಯಾಗಿ ಭರ್ತಿ ಮಾಡಿರುವ, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿರುವ ಬಗ್ಗೆ ಪರಿಶೀಲಿಸಿ, ಸ್ವೀಕರಿಸಲಾಗುವುದು. ಅಪೂರ್ಣ ಮಾಹಿತಿ/ ದಾಖಲೆಗಳನ್ನು ಒಳಗೊಂಡ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ಹೀಗೆ ತಿರಸ್ಕರಿಸಲಾದ ಅರ್ಜಿಗಳನ್ನು ಸರಿಪಡಿಸಿ ನಿಗದಿತ ದಿನಾಂಕದ ಒಳಗೆ ಸಂಬಂಧಿಸಿದ ಶುಲ್ಕಗಳೊಂದಿಗೆ ಮರು ಸಲ್ಲಿಸದೇ ಇದ್ದಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿದ ದಂಡಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

10. ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯ ಪಠ್ಯಕ್ರಮ ನಿಗದಿಪಡಿಸಿರುವ ಕೋರ್ಸ/ ವಿಷಯಗಳಿಗೆ ಮಾತ್ರ ಸಂಯೋಜನೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಬೇಕು.

11. ಪ್ರಸ್ತುತ ವರ್ಷ ಪ್ರಾರಂಭಿಸಬೇಕಾದ ಮಂಜೂರಾತಿಯಾದ ಮಹಾವಿದ್ಯಾಲಯವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸಂಸ್ಥೆಯವರೇ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಅಥವಾ ಹೊಸ ಸಂಯೋಜನೆ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ವಿಳಂಬವಾದಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯದ ಸಂಯೋಜನೆಗೆ ಸಂಬಂಧಿಸಿದ ಇತರೆ ಶುಲ್ಕಗಳೊಂದಿಗೆ ಕೋರ್ಸಿನ ಮುಂದುವರಿಕೆ ಶುಲ್ಕಗಳನ್ನು ಪ್ರತಿ ವರ್ಷವು ಭರಿಸಬೇಕಾಗುತ್ತದೆ.

12. ಸ್ಥಳೀಯ ತನಿಖಾ ಸಮಿತಿಯು ಮಹಾವಿದ್ಯಾಲಯಗಳಲ್ಲಿ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳ ಕೊರತೆಗಳನ್ನು ಮನಗಂಡು, ಸುಧಾರಿಸಿಕೊಳ್ಳಲು ಷರತ್ತುಗಳನ್ನು ವಿಧಿಸಿ, ಸದರಿ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮರುಪರಿಶೀಲನೆಗೆ ಶಿಫಾರಸ್ಸು ಮಾಡಿ ವರದಿ ಸಲಿಸಿದ್ದಲ್ಲಿ, ಅಂತಹ ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಅವಧಿಯೊಳಗೆ ಮರುಪರಿಶೀಲನೆಗೆ ನಿಗದಿಪಡಿಸಿದ ಶುಲ್ಕವನ್ನು ಭರಿಸಿ, ಸ್ಥಳಿಯ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಪೂರೈಸಿದ ಕುರಿತಾಗಿ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ನಿಗದಿಪಡಿಸಿದ ಅವಧಿಯ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ವಿಶ್ವವಿದ್ಯಾಲಯದ ನಿರ್ದೇಶನವನ್ನು ಪಾಲಿಸಲು ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಫಲವಾದಲ್ಲಿ ಅಂತಹ ಮಹಾವಿದ್ಯಾಲಯಗಳ/ ಆಡಳಿತ ಮಂಡಳಿಯವರು ಸಂಬಂಧಿಸಿದ ಸಂಯೋಜನೆಗೆ ನಿರಾಸಕ್ತಿ ಹೊಂದಿರುವುದಾಗಿ ತಿಳಿದು, ಸಂಯೋಜನೆ ಅರ್ಜಿಯನ್ನು ಹಿಂಪಡೆದಿರುವುದಾಗಿ ಪರಿಗಣಿಸಿ ಯಾವುದೇ ಹಿಂಬರಹ ನೀಡದೆ ಅಂತಹ ಅರ್ಜಿಗಳನ್ನು ಮುಕ್ತಾಯಗೊಳಿಸಲಾಗುವುದು.

13. ವಿಶ್ವವಿದ್ಯಾಲಯ ಕಾಲಕಾಲಕ್ಕೆ ಸೂಚಿಸಿದಂತೆ ಸಂಯೋಜನೆಗೊಳಪಟ್ಟ ಎಲ್ಲಾ ಮಹಾವಿದ್ಯಾಲಯಗಳು ನಿಗದಿಪಡಿಸಿದ ಎಲ್ಲ ಘಟಕಗಳನ್ನು ರಚಿಸಿ, ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ, ಘಟಕಗಳ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಕುರಿತಾಗಿ ದಾಖಲೆಗಳನ್ನು ಹೊಂದಿರಬೇಕೆಂದು ಸೂಚಿಸಲಾಗಿದೆ.

## ಸಂಯೋಜನೆಯ ವಿಧ ಹಾಗೂ ಕೋರ್ಸ್‌ವಾರು ಸೂಚನೆಗಳು:

**I.** ಹೊಸ ಮಹಾವಿದ್ಯಾಲಯ/ ಹೊಸ ಕೋರ್ಸ್ ಸಂಯೋಜನೆ:

1. ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳು ಸರ್ಕಾರದ ನಿಯಮಾವಳಿಗಳ ಪ್ರಕಾರ ನೋಂದಾಯಿತವಾಗಿರತಕ್ಕದ್ದು ಮತ್ತು ಟ್ರಸ್ಟ್/ಸಂಘ ಸಂಸ್ಥೆಯ ಬೈಲಾ ನಿಯಮಗಳನ್ನು ಹೊಂದಿರಬೇಕು.

2. The college/institution shall hold undisputed ownership and possession of land free from any or all encumbrances, measuring.
   **a.** Not less than 0.5 acres if it is located in mega cities.
   **b.**1 acre if it is located in BMRDA, city corporations and district head quarters.
   **c.** 1.5 acres if it is located in municipalities or taluk head quarters.
   d. 3 acres if it is located in any other rural areas.

   Provides that these reqirements shall not apply colleges already affiliated to the university prior to the date notification of UGC. (Affiliation of colleges by the universities) Regulations 2009 and its amendments in 2012, only if the existing programmes and intake of students are not altered.

3. ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.

a. ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ಕಾರ್ಪೋರೇಷನಗಳಿಂದ ಪಡೆದ ಇತ್ತೀಚಿನ ಖಾತಾನಕಲು

ಅಥವಾ

ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನ ಪತ್ರ.

4. ಮಹಾವಿದ್ಯಾಲಯ ಹೊಂದಿರುವ ಕಟ್ಟಡವು ಕೃಷಿಯೇತರ ಭೂಮಿಯಾಗಿರಬೇಕು.

5. ಹೊಸ ಕಾಲೇಜು ಸ್ಥಾಪಿಸಲು ಉದ್ದೇಶಿಸಿ, ಸಂಯೋಜನೆ ಕೋರಿ ಸಲ್ಲಿಸಲಾಗುವ ಅರ್ಜಿಯೊಂದಿಗೆ NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆ ಮತ್ತು Fire Services Department ನಿಂದ Compliance Certificates ಗಳನ್ನು ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

6. Administrative, academic and other buildings with sufficient accommodation to meet with the immediate academic and other space requirements, taking care that all buildings constructed in the college are disabled friendly. The academic building should be sufficient to accommodate the faculties, lecture/ seminar rooms, library and laboratories with a minimum of 15 sq. ft. per student in lecture/seminar rooms 7.5 sq. ft. per student in library and 10 sq. ft. per student in each of the laboratories.

7. The Registered Society/ Trust in justified exceptional cases may be allowed to start the college for the first year of the programs in a readily available building, with the condition that all other academic and administrative requirements are satisfied under the Regulations and the college shall complete the buildings and other requirements by the end of the second year and the college is moved completely to the proposed permanent building by the beginning of the third year, failing which the college shall not be granted renewal of temporary affiliation until the college moves to the permanent buildings. Under no circumstances, extension of time for this movement to the permanent building shall be granted by the University beyond five years.

8. In particular, it shall produce evidence of creating and maintaining a Corpus Fund permanently in the name of the college by way of irrevocable Government Securities of Rs. 15 Iakhs per programme, if the college proposes to conduct programme only in Arts, Science and Commerce, Rs. 35 lakh per programme or so prescribed by the relevant Statutory/Regulatory body, if it proposes to offer professional programmes, or FDRs for like amounts jointly held by the college and the University for a minimum lock in period of three years. The interest accrued out of it may be utilized by the college with the prior permission of the University for strengthening its infrastructure facilities.

9. ಟ್ರಸ್ಟ್/ಸಂಘ ಸಂಸ್ಥೆಯು ಮಹಾವಿದ್ಯಾಲಯವನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯದ ನಿಯಮಾವಳಿಯಂತೆ ಕಾಲೇಜಿಗೆ ಅರ್ಹ ಪ್ರಾಂಶುಪಾಲರನ್ನು ಮತ್ತು ಪ್ರಾರಂಭಿಸಲಿರುವ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಪೂರ್ಣಕಾಲಿಕ ಉಪನ್ಯಾಸಕರನ್ನು ಖಾಯಂ ನೆಲೆಯಲ್ಲಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಕಛೇರಿಯ ಅವಶ್ಯಕತೆಗೆ ತಕ್ಕಂತೆ ಅಧೀಕ್ಷಕರು, ಗುಮಾಸ್ತರು ಹಾಗೂ ಜವಾನರನ್ನು ನೇಮಕ ಮಾಡಿಕೊಳ್ಳತಕ್ಕದ್ದು.

10. ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು, ಸಂಬಂಧಿಸಿದ **ಸ್ನಾತಕ ಕೋರ್ಸ್‌ನ್ನು ಆರಂಭಿಸಿ ಐದು ವರ್ಷಗಳು ಪೂರ್ಣಗೊಂಡಿರಬೇಕು ಮತ್ತು ಸದರಿ ಪದವಿ ಕೋರ್ಸ್‌ಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯದಲ್ಲಿಯೇ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಿರಬೇಕು.** ಅಲ್ಲದೇ ಸ್ಥಳೀಯ ತನಿಖಾ ಸಮಿತಿಗಳು ವಿಧಿಸಿದ ಈ ಹಿಂದಿನ ಎಲ್ಲಾ ಷರತ್ತುಗಳನ್ನು ಸಂಪೂರ್ಣವಾಗಿ ಹಾಗೂ ಕಡ್ಡಾಯವಾಗಿ ಪೂರೈಸಿರಬೇಕು. ಹೀಗೆ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಕೋರ್ಸಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಬೋಧಕ ಸಿಬ್ಬಂದಿಯನ್ನು ಹೊಂದಿರಬೇಕು. ಇವರುಗಳಲ್ಲಿ ಇಬ್ಬರು ಪಿಎಚ್.ಡಿ. ಪದವಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಸಂಶೋಧನೆ ಕಾರ್ಯಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಅಂದರೆ ಸರ್ಕಾರದ ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪತ್ರ ಸಂಖ್ಯೆ: 1) ಇಡಿ 99 ಯುಎನ್‌ಇ 2002 ದಿನಾಂಕ: 02-11-2002, 2) ಇಡಿ 107 ಯುಆರ್‌ಸಿ 2006 ದಿನಾಂಕ: 21-08-2006 ರ ಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯ ಹೊಂದಿರುವ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸಬೇಕು.

11. ಹೊಸದಾಗಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳು ಉದ್ದೇಶಿತ ಮಹಾವಿದ್ಯಾಲಯವನ್ನು ನಡೆಸಲು ವಿಶ್ವವಿದ್ಯಾಲಯ/ ಸರ್ಕಾರ/ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ./ ಇತ್ಯಾದಿ ಸಂಬಂಧಿಸಿದ ಪ್ರಾಧಿಕಾರಗಳ ನಿಯಮಾವಳಿಗಳಂತೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

## II. ಮುಂದುವರಿಕೆ ಹಾಗೂ ವಿಸ್ತರಣೆ ಸಂಯೋಜನೆ:

1. ಮಹಾವಿದ್ಯಾಲಯಗಳು ಹೊಸ ಸಂಯೋಜನೆ ಪಡೆದಿರುವ ಕೋರ್ಸಗಳ ಅವಧಿ ಎರಡು ವರ್ಷ ಇದ್ದಲ್ಲಿ ಎರಡನೇ ವರ್ಷಕ್ಕೆ ಮುಂದುವರಿಕೆ ಹಾಗೂ ವಿಸ್ತರಣೆ ಮತ್ತು ಮೂರು ವರ್ಷಗಳ ಅವಧಿ ಇದ್ದಲ್ಲಿ ಎರಡು ಮತ್ತು ಮೂರನೇ ವರ್ಷಕ್ಕೆ ಮುಂದುವರಿಕೆ ಹಾಗೂ ವಿಸ್ತರಣೆ ಮತ್ತು ನಾಲ್ಕು ವರ್ಷಗಳ ಅವಧಿ ಇದ್ದಲ್ಲಿ ಎರಡು, ಮೂರು ಮತ್ತು ನಾಲ್ಕನೇ ವರ್ಷಕ್ಕೆ ಮುಂದುವರಿಕೆ ಹಾಗೂ ವಿಸ್ತರಣೆ ಶುಲ್ಕ ಭರಿಸಬೇಕಾಗುತ್ತದೆ. ಅಲ್ಲದೇ ಹಿಂದಿನ ವರ್ಷದಲ್ಲಿ ಬಾಕಿ ಉಳಿಸಿಕೊಂಡಿರುವ ಸಂಯೋಜನಾ ಶುಲ್ಕವನ್ನು ಭರಿಸಬೇಕಾಗುತ್ತದೆ.

2. ಸಂಯೋಜನಾ ಅರ್ಜಿಯೊಂದಿಗೆ ಹಿಂದಿನ ಮೂರು ವರ್ಷ ಪಡೆದುಕೊಂಡ ಸಂಯೋಜನಾ ಅಧಿಸೂಚನೆಯ ಪ್ರತಿಯನ್ನು ಮತ್ತು ಪ್ರವೇಶ ಮಿತಿ ಹೆಚ್ಚಳದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.

3 ತಾವು ಸಲ್ಲಿಸುವ ಸಂಯೋಜನಾ ಅರ್ಜಿಯಲ್ಲಿ ಕಡ್ಡಾಯವಾಗಿ ಸಮೂಹವಾರು ವಿಷಯಗಳನ್ನು ನಮೂದಿಸಲು ಸೂಚಿಸಿದೆ. ವಿಷಯಗಳ ಸಮೂಹ (Combination) ಆಯ್ಕೆ ಮಾಡುವಾಗ ಮಹಾವಿದ್ಯಾಲಯಗಳು ತಪ್ಪು ಎಸಗಿದ್ದರೆ ಅವುಗಳಿಗೆ ಮಹಾವಿದ್ಯಾಲಯಗಳೇ ಹೊಣೆಗಾರರು. ಇಂತಹ ತಪ್ಪುಗಳು ಕಂಡು ಬಂದಲ್ಲಿ ಕೂಡಲೇ ನಿಗದಿತ ಅವಧಿಯ ಒಳಗೆ ವಿಶ್ವವಿದ್ಯಾಲಯದ ಮಾರ್ಗದರ್ಶನದೊಂದಿಗೆ ನಿಯಮಾನುಸಾರ ಸರಿಪಡಿಸಿಕೊಳ್ಳಲು ಸೂಚಿಸಲಾಗಿದೆ. ಇಂತಹ ಸಂದರ್ಭದಲ್ಲಿ ವಿಳಂಬವಾಗಿ ಉಂಟಾಗುವ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೇ ಜವಾಬ್ದಾರರಾಗಿರುತ್ತಾರೆ.

## III. ಶಾಶ್ವತ ಸಂಯೋಜನೆ:

1. ಸತತವಾಗಿ 5 ವರ್ಷಗಳ ತಾತ್ಕಾಲಿಕ ಸಂಯೋಜನೆಯನ್ನು ಪೂರೈಸಿದ ಮತ್ತು ಹಿಂದಿನ ಐದು ವರ್ಷಗಳ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿದ ಮಹಾವಿದ್ಯಾಲಯಗಳು ತಮ್ಮ ಕೋರ್ಸಗಳಿಗೆ/ವಿಷಯಗಳಿಗೆ ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದಲ್ಲಿ ಮಾತ್ರ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

2. ಮಹಾವಿದ್ಯಾಲಯದ ಆಡಳಿತ ಮಂಡಳಿಯು ಕರ್ನಾಟಕ ಸರ್ಕಾರದ ನೋಂದಣಿ ಕಾಯ್ದೆಗಳಂತೆ ನೊಂದಣಿಯಾಗಿದ್ದು, ನಿಯಾಮಾನುಸಾರವಾಗಿ ಕಾಲಕಾಲಕ್ಕೆ ನೋಂದಣಿಯನ್ನು ನವೀಕರಣ ಮಾಡಿಕೊಂಡಿರಬೇಕು ಹಾಗೂ ಕಾಲಕಾಲಕ್ಕೆ ಆಡಳಿತ ಮಂಡಳಿಯ ಸಭೆಗಳನ್ನು ನಡೆಸಿರಬೇಕು ಹಾಗೂ ಕಾಯ್ದಿರಿಸಿದ ಸಭೆಗಳ ನಡಾವಳಿಗಳನ್ನು ಲಗತ್ತಿಸಿ ನೀಡುವುದು.

3. ತಮ್ಮ ಮಹಾವಿದ್ಯಾಲಯದ ಕೋರ್ಸಗಳಿಗೆ/ ವಿಷಯಗಳಿಗೆ ಶಾಶ್ವತ ಸಂಯೋಜನೆ ಪಡೆಯಲು ಇಚ್ಛಿಸಿದ್ದಲ್ಲಿ, ಮೊದಲು ಯು.ಜಿ.ಸಿ. ನಿಯಮದಂತೆ ಮಹಾವಿದ್ಯಾಲಯವು 2(ಎಫ್) ಮಾನ್ಯತೆ ಪಡೆದಿರಬೇಕು.

4. ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸುವ ನಿಯಮಾವಳಿಗಳಂತೆ ಸ್ವಂತ ಭೂಮಿ, ಕಟ್ಟಡ, ಬೋಧಕ ಸಿಬ್ಬಂದಿ ಹಾಗೂ ಇತರೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರಬೇಕು.

5. ಮಹಾವಿದ್ಯಾಲಯಗಳು ಶಾಶ್ವತ ಸಂಯೋಜನೆಗಾಗಿ ನ್ಯಾಕ್‌ನಿಂದ ಮಾನ್ಯತೆ ಪಡೆದಿರಬೇಕು. ಒಂದು ವೇಳೆ ಮಹಾವಿದ್ಯಾಲಯಗಳು ನ್ಯಾಕ್ ಮಾನ್ಯತೆಗಾಗಿ ಎಸ್.ಎಸ್.ಆರ್. ಸಲ್ಲಿಕೆ ಮಾಡಿದ್ದಲ್ಲಿ ಅಂತಹ ಮಹಾವಿದ್ಯಾಲಯಗಳೂ ಕೂಡಾ ಶಾಶ್ವತ ಸಂಯೋಜನೆ/ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಮಹಾವಿದ್ಯಾಲಯವು ನ್ಯಾಕ್ ಮಾನ್ಯತೆಗೆ ಸಲ್ಲಿಸಿದ ಅರ್ಜಿ ತಿರಸ್ಕೃತವಾದಲ್ಲಿ, ಅಂತಹ ಮಹಾವಿದ್ಯಾಲಯಕ್ಕೆ ತಾತ್ಕಾಲಿಕ ಸಂಯೋಜನೆಯನ್ನೇ ಮುಂದುವರೆಸಲಾಗುವುದು.

6. ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ಅರ್ಜಿಗಳೊಂದಿಗೆ, ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನಾ ಅಧಿಸೂಚನೆಗಳು, ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಫಲಿತಾಂಶಗಳು ಹಾಗೂ ಸಂಸ್ಥೆಯ/ ಮಹಾವಿದ್ಯಾಲಯದ ಲೆಕ್ಕ ಪರಿಶೋಧಕರಿಂದ ದೃಢಿಕರಿಸಿದ ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಸ್ಥಳೀಯ ತನಿಖಾ ಸಮಿತಿಯ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಗಳನ್ನು ಪೂರ್ಣಗೊಳಿಸಿ ದೃಢೀಕರಿಸಿ ಒದಗಿಸಬೇಕು.

7. ಮಹಾವಿದ್ಯಾಲಯವು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರದ ನಿಯಮಾನುಸಾರವಾಗಿ ಕನಿಷ್ಠ 50% ರಷ್ಟು ಖಾಯಂ ಆಗಿ ನೇಮಕವಾದ ಸಿಬ್ಬಂದಿಗಳನ್ನು ಹೊಂದಿರಬೇಕು ಹಾಗೂ ನಿಯಮಗಳಿಗೆ ಅನುಗುಣವಾಗಿ ವೇತನ, ಪಿ.ಎಫ್, ಗ್ರಾಚುಯಿಟಿ, ಇ.ಎಸ್.ಐ. ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಿರಬೇಕು.

8. ಹೀಗೆ ಎಲ್ಲಾ ಷರತ್ತುಗಳನ್ನು/ ನಿಯಮಗಳನ್ನು ಪಾಲಿಸಿದ ಮಹಾವಿದ್ಯಾಲಯಗಳಿಗೆ ನೀಡಬೇಕಾದ ಶಾಶ್ವತ ಸಂಯೋಜನೆಯು ವಿದ್ಯಾ ವಿಷಯಕ ಪರಿಷತ್ ಸಭೆ, ಸಿಂಡಿಕೇಟ್ ಸಭೆ ಹಾಗೂ ಸರ್ಕಾರದ ಅನುಮೋದನೆಗಳ ಷರತ್ತಿಗೆ ಹಾಗೂ ಕಾಲಕಾಲಕ್ಕೆ ಯುಜಿಸಿ/ ಸರ್ಕಾರದವರು ಹೊರಡಿಸುವ ಆದೇಶ/ ತಿದ್ದುಪಡಿಗಳ ಷರತ್ತುಗಳಿಗೆ ಒಳಪಟ್ಟಿರುತ್ತದೆ.

9. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017 ದಿನಾಂಕ: 07-07-2017 ರ ಪತ್ರದಂತೆ ಶಾಶ್ವತ ಸಂಯೋಜನೆ ಅವಧಿಯು ನ್ಯಾಕ್ ಮಾನ್ಯತೆಯ ಗ್ರೇಡ್ ಆಧಾರದ ಮೇಲೆ ಅವಲಂಬಿತವಾಗಿರುವುದಾಗಿ ಸೂಚಿಸಿರುವುದರಿಂದ ನ್ಯಾಕ್ ಸಂಸ್ಥೆಯಿಂದ "ಎ" ಗ್ರೇಡ್ ಮಾನ್ಯತೆ ಪಡೆದಲ್ಲಿ 5 ವರ್ಷ, "ಬಿ" ಗ್ರೇಡ್ ಮಾನ್ಯತೆ ಪಡೆದಲ್ಲಿ 4 ವರ್ಷ, "ಸಿ" ಗ್ರೇಡ್ ಮಾನ್ಯತೆ ಪಡೆದಲ್ಲಿ 3 ವರ್ಷಗಳ ಅವಧಿಗೆ ಶಾಶ್ವತ ಸಂಯೋಜನೆ ಅವಧಿಯನ್ನು ನಿಗದಿಪಡಿಸಲಾಗುವುದು ಅಲ್ಲದೆ ಶಾಶ್ವತ ಸಂಯೋಜನೆಯ ಅವಧಿಯು ಸರ್ಕಾರ/ ಯು.ಜಿ.ಸಿ. ಯಿಂದ ಕಾಲಕಾಲಕ್ಕೆ ಬದಲಾವಣೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.

## IV. ಶಾಶ್ವತ ಸಂಯೋಜನೆ ನವೀಕರಣ:

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ ಅಧಿನಿಯಮ 62(3) ರ ಮೇರೆಗೆ ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಪ್ರಕಾರ್ಯಗಳನ್ನು ವಿಶ್ವವಿದ್ಯಾಲಯವು ಪರಿಶೀಲಿಸಬೇಕಾಗುತ್ತದೆ. ಕಾರಣ ಶಾಶ್ವತ ಸಂಯೋಜನೆಯನ್ನು ಪಡೆದುಕೊಂಡ ಮಹಾವಿದ್ಯಾಲಯಗಳು ಈ ಕೆಳಗಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

2. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಹೊಸ ಶಾಶ್ವತ ಸಂಯೋಜನೆಗೆ ಸಂಬಂಧಿಸಿದ ಎಲ್ಲಾ ನಿಯಮಗಳೂ ಅನ್ವಯವಾಗುತ್ತವೆ.

3. ಮಹಾವಿದ್ಯಾಲಯಗಳು ತಮ್ಮ ಶಾಶ್ವತ ಸಂಯೋಜನೆಯು ಪೂರ್ಣಗೊಳ್ಳುವ ಒಂದು ವರ್ಷ ಮೊದಲೇ ಶಾಶ್ವತ ಸಂಯೋಜನಾ ನವೀಕರಣ ಅರ್ಜಿಯನ್ನು ಆನ್‌ಲೈನ್ ಮೂಲಕ ಸಂಬಂಧಿಸಿದ ಶುಲ್ಕಗಳೊಂದಿಗೆ ಭರಿಸಿ, ಅರ್ಜಿ ಸಲ್ಲಿಸತಕ್ಕದ್ದು (**ಉದಾ:** ಮಹಾವಿದ್ಯಾಲಯವು ನ್ಯಾಕ್‌ನಿಂದ 'ಎ' ಗ್ರೇಡ್ ಮಾನ್ಯತೆಯೊಂದಿಗೆ 2018-19 ರಿಂದ 2022-23ರ ವರೆಗೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವಿಕರಣ ಪಡೆದಿದ್ದಲ್ಲಿ, ಅಂತಹ ಮಹಾವಿದ್ಯಾಲಯವು ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ, 2023-24ನೇ ಸಾಲಿನ ಸಂಯೋಜನೆಗಾಗಿ ವಿಶ್ವವಿದ್ಯಾಲಯವು ಸಂಯೋಜನೆ ಅಧಿಸೂಚನೆ ಪ್ರಕಟಿಸಿದಾಗ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು).

4. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಮಹಾವಿದ್ಯಾಲಯಗಳು ಹಿಂದಿನ ಸ್ಥಳೀಯ ತನಿಖಾ ಸಮಿತಿಯು ವಿಧಿಸಿದ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರಬೇಕು.

5. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಮಹಾವಿದ್ಯಾಲಯದವರು ನಿಗದಿತ ಸಮಯಕ್ಕೆ ಅರ್ಜಿ ಸಲ್ಲಿಸದಿದ್ದಲ್ಲಿ ಮುಂದಾಗುವ ಎಲ್ಲ ಆಗು-ಹೋಗುಗಳಿಗೆ ಮಹಾವಿದ್ಯಾಲಯದವರೇ ಜವಾಬ್ದಾರರಾಗಿರುತ್ತಾರೆ.

## VII. ಸರ್ಟಿಫಿಕೇಟ್ ಕೋರ್ಸ್ ಇನ್ ಯೋಗಾ ಸ್ಟಡೀಸ್ ಮತ್ತು ಪಿ.ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್:

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ದಿಂದ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡಿಸ್ ಕೋರ್ಸನ್ನು ಪ್ರಾರಂಭಿಸಲು ಇಚ್ಚಿಸ್ಸುವ ಮಹಾವಿದ್ಯಾಲಯಗಳಿಗೆ ಸಂಯೋಜನಾ ಶುಲ್ಕ ರಹಿತವಾಗಿ ಸಂಯೋಜನೆ ನೀಡಲು ನಿರ್ಧರಿಸಿದೆ. ಆದ್ದರಿಂದ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯದವರು ಅಥವಾ ಸರ್ಕಾರದ ನಿಯಮಾವಳಿಯಂತೆ ಸಂಘ/ ಸಂಸ್ಥೆ/ ಟ್ರಸ್ಟ್ ಹೊಂದಿದವರು ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್ ಪ್ರಾರಂಭಿಸಲು ಸಂಯೋಜಿತ ಮಹಾವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಾವಿದ್ಯಾಲಯವು ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳ ಜೊತೆಗೆ ಅರ್ಹ ಶಿಕ್ಷರನ್ನು ಅಂದರೆ ಎಂ.ಎ. ಯೋಗ ಪದವಿ ಹೊಂದಿದ ಶಿಕ್ಷರನ್ನು ನೇಮಕ ಹೊಂದಿರುವ ಹಾಗೂ ಯೋಗಾ ಪ್ರಯೋಗಾಲಯ ಹೊಂದಿದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

## VIII. ಸಂಶೋಧನಾ ಕೇಂದ್ರದ ಮಾನ್ಯತೆ:

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಸ್ನಾತಕೋತ್ತರ ಕೋರ್ಸ್ ಸಂಯೋಜನೆ ಹೊಂದಿರುವಂತಹ ಮಹಾವಿದ್ಯಾಲಯದವರು ಸಂಶೋಧನಾ ಕೇಂದ್ರದ ಸ್ಥಾನಮಾನ ಪಡೆಯವುದಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದ್ದು, ಆಸಕ್ತ ಮಹಾವಿದ್ಯಾಲಯಗಳು ಈ ಕೆಳಕಾಣಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು.

1. ಮಹಾವಿದ್ಯಾಲಯವನ್ನು ಸರ್ಕಾರ/ ವಿಶ್ವವಿದ್ಯಾಲಯ/ ಯುಜಿಸಿ ಮತ್ತು ಇನ್ನಿತರ ಸಂಬಂಧಿತ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾರಂಭಿಸಿರಬೇಕು.
2. ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಿ ಕಡ್ಡಾಯವಾಗಿ ಐದು ವರ್ಷಗಳನ್ನು ಪೂರೈಸಿರಬೇಕು.
3. **ಮಹಾವಿದ್ಯಾಲಯವು ಕನಿಷ್ಠ "ಬಿ" ಗ್ರೇಡ್ ನ್ಯಾಕ್ ಮಾನ್ಯತೆಯನ್ನು ಪಡೆದಿರಬೇಕು.**
4. ಮಹಾವಿದ್ಯಾಲಯವು ಹೊಂದಿರುವ ಸ್ನಾತಕೋತ್ತರ ಕೋರ್ಸ್/ ವಿಷಯಕ್ಕೆ ಮಾತ್ರ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬಹುದು.
5. ಸಂಶೋಧನಾ ಕೇಂದ್ರ ಪಡೆಯವುದಕ್ಕಾಗಿ ಅಗತ್ಯವಿರುವ ಪಿ.ಎಚ್.ಡಿ. ಪದವಿಯನ್ನು ಹೊಂದಿರುವ ಮತ್ತು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳನ್ವಯ ಮಾರ್ಗದರ್ಶಕರಾಗಲು (Guideship) ಅರ್ಹತೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

6. ಸಂಶೋಧನಾ ಕೇಂದ್ರಕ್ಕೆ ಅನ್ವಯವಾಗುವಂತೆ ಸುಸಜ್ಜಿತ ಗ್ರಂಥಾಲಯದ ಕಟ್ಟಡ ಹೊಂದಿ, ಗ್ರಂಥಾಲಯದಲ್ಲಿ ಸಂಶೋಧನಾ ಕೇಂದ್ರಕ್ಕೆ ಬೇಕಾಗುವಷ್ಟು ಪುಸ್ತಕಗಳನ್ನು ಮತ್ತು ಜರ್ನಲ್‌ಗಳನ್ನು ಹೊಂದಿರಬೇಕು ಮತ್ತು ಗಣಕಯಂತ್ರ ಪ್ರಯೋಗಾಲಯ, ಅಂತರ್ಜಾಲದ ವ್ಯವಸ್ಥೆ, e-learning ವ್ಯವಸ್ಥೆಯ ಜೊತೆಗೆ ಸುಸಜ್ಜಿತ ಪ್ರಯೋಗಾಲಯದಂತಹ ಇನ್ನಿತರ ಎಲ್ಲ ಮೂಲಭೂತ ಮತ್ತು ಶೈಕ್ಷಣಿಕ ಸೌಕರ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
7. ಸಂಶೋಧನಾ ಕೇಂದ್ರದ ಮಾನ್ಯತೆ ಪಡೆಯುವುದಕ್ಕಾಗಿ ಮತ್ತು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಸಂಸ್ಥೆಯ ಆಯವ್ಯಯದಲ್ಲಿ ಹಣವನ್ನು ಕಾಯ್ದಿರಿಸಿ ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿರಬೇಕು.

8. ಸಂಶೋಧನಾ ಕೇಂದ್ರ ಪಡೆಯುವುದಕ್ಕಾಗಿ ಪ್ರತಿ ವಿಷಯಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.

ಮೇಲ್ಕಾಣಿಸಿದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಸಂಶೊಧನಾ ಕೇಂದ್ರದ ಸ್ಥಾನಮಾನ ಪಡೆಯಲು ಇಚ್ಛಿಸುವ ಸಂಯೋಜಿತ ಮಹಾವಿದ್ಯಾಲಯಗಳು ಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ **(www.vskub.ac.in)** ಲಭ್ಯವಿರುವ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ, ಸಂಬಂಧಿಸಿದ ಎಲ್ಲಾ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿದ ನಮೂನೆಯಲ್ಲಿ ಭೌತಿಕವಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗದಲ್ಲಿ ಪಡೆಯಬಹುದಾಗಿದೆ.

23/10/17

ಕುಲಸಚಿವರು,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.